## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಶ್ರೀ ಗದಗೆಪ್ಪ ಕುರಕೋಟೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್(ಬಿ) ಬೀದರ್ ಜಿಲ್ಲೆ, ಇವರ ವಿರುದ್ಧದ ಶಿಸ್ತು ಕ್ರಮ – ಅಂತಿಮ ಆದೇಶ.

ಓದಲಾಗಿದೆ: 1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 105 ವಿಸೇಬಿ 2013 ದಿ:23-12-2013.
2. ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಪತ್ರ ಸಂಖ್ಯೆ: ಜಿಪಂಬಿ/ಸಿಬ್ಬಂದಿ-1/ಸಿಆರ್-09/2012-13 ದಿನಾಂಕ:16-12-2014.

------

ಪ್ರಸ್ತಾವನೆ:

ಶ್ರೀ ಗದಗೆಪ್ಪ ಕುರಕೋಟೆ, ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್(ಬಿ) ಬೀದರ್ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ್ದಾರೆ ಎನ್ನಲಾದ ಈ ಕೆಳಕಂಡ ಕರ್ತವ್ಯಲೋಪ/ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 12(1) (ಎ) ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 23-12-2013 ರಲ್ಲಿ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಯಿತು.

ದಿನಾಂಕ:14-8-2013 ರಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ನಿಮ್ಮ ಅಧಿಕಾರ ವ್ಯಾಪ್ತಿ ಬಗ್ಗೆ ಮಾನ್ಯ ಉಸ್ತುವಾರಿ ಸಚಿವರು ವಿಚಾರಿಸಿದಾಗ ಅದಕ್ಕೆ ನೀವು ಸ್ಪಷ್ಟವಾಗಿ ಉತ್ತರಿಸಲಿಲ್ಲ. ಮುಂದುವರೆದು ವಸತಿ ಯೋಜನೆಯ ಗ್ರಾಮ ಸಭೆಯಲ್ಲಿ ನೀವು ಭಾಗವಹಿಸಿರುವುದಿಲ್ಲವೆಂದು ಹಾಗೂ ಅದಕ್ಕಾಗಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ಗ್ರಾಮ ಸಭೆ ನಡೆಸಲು ನೇಮಿಸಿ. ನೀವು ಆದೇಶ ನೀಡಿರುವುದಾಗಿ ಸದರಿ ಕೆ.ಡಿ.ಪಿ ಸಭೆಯಲ್ಲಿ ಉತ್ತರಿಸುತ್ತಾ ನೀವು ಖುದ್ದಾಗಿ 2 ಜಮಾಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದಾಗಿ ಸ್ಪಷ್ಟಪಡಿಸಿರುತ್ತೀರಿ. ನೀವು ಒಂದೂ ಗ್ರಾಮ ಸಭೆಯಲ್ಲೂ ಸಹ ಭಾಗವಹಿಸದೇ ಇರುವ ಮೂಲಕ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನೀವು ವಿಫಲರಾಗಿರುವುದು.

ಮುಂದುವರೆದು ಔರಾದ್ (ಬಿ) ತಾಲ್ಲೂಕಿಗೆ 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಸುಮಾರು 5519 ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿ ಅನುಮೋದನೆ ಪಡೆಯುವಲ್ಲಿ ವಿಫಲರಾಗಿರುತ್ತೀರಿ. ಔರಾದ್ (ಬಿ) ತಾಲ್ಲೂಕಿನ ಕೆಲವು ಗ್ರಾ.ಪಂ. ಗಳಿಗೆ ಸರ್ಕಾರದ ಯೋಜನೆಗಳಂತೆ ಎಲ್ಲಾ ಕ್ಷೇತ್ರಗಳಿಗೆ ಸಮನಾಗಿ ಅನುದಾನ ಹಂಚಿಕೆ ಮಾಡದೆ ಸಹ ನೀವು ಕರ್ತವ್ಯಲೋಪವೆಸಗಿರುತ್ತೀರಿ.

### ಆಪಾದಿತರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು

ದಿನಾಂಕ: 14-08-2013ರಂದು ಮಾನ್ಯ ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಕೆ.ಡಿ.ಪಿ. ತ್ರೈಮಾಸಿಕ ಸಭೆಯಲ್ಲಿ ಅಧಿಕಾರ ವ್ಯಾಪ್ತಿ ಬಗ್ಗೆ ಉಸ್ತುವಾರಿ ಸಚಿವರು ವಿಚಾರಿಸಿದಾಗ ಅವರ ಎದುರಿಗೆ ಹೇಗೆ ಉತ್ತರಿಸಬೇಕೆಂದು ಮುಜುಗರಗೊಂಡು ಉತ್ತರಿಸಲಿಕ್ಕಾಗದೆ ಸುಮ್ಮನಿದ್ದಿರುರುವುದಾಗಿ, ಕರ್ತವ್ಯದ ಒತ್ತಡದಲ್ಲಿ ಗ್ರಾಮ ಸಭೆಗೆ ಭಾವಹಿಸಲು

ಆಗಿರುವುದಿಲ್ಲವೆಂದು, ತಾಲ್ಲೂಕಿನ ಇತರೆ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ಗ್ರಾಮ ಸಭೆಗೆ ನೀಯೋಜಿಸಿರುವುದಾಗಿ, 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಔರಾದ್(ಬಿ) ತಾಲ್ಲೂಕಿನ ಹಿಂದೆ 7428 ಮನೆಗಳು ಮತ್ತು 5000 ಮನೆಗಳು ಹೆಚ್ಚುವರಿಯಾಗಿ ಸರ್ಕಾರದ ಪತ್ರ ಸಂಖ್ಯೆ: ವಿ/43/ಹೆಚ್‌ಎಹೆಚ್/2012, ದಿನಾಂಕ: 25-04-2012 ರಂದು ಮಂಜೂರು ಮಾಡಿದ್ದು ಒಟ್ಟು 12428 ಮನೆಗಳು ಮಂಜೂರಾಗಿರುತ್ತವೆ. ಕಾರ್ಯನಿರ್ವಾಹಕ ಅಧಿಕಾರಿಯಾಗಿ ದಿನಾಂಕ: 22-06-2012 ರಂದು ಔರಾದ್(ಬಿ) ತಾಲ್ಲೂಕು ಪಂಚಾಯತಿಯ ಅಧಿಕಾರಿಯಾಗಿ, ಅಧಿಕಾರ ವಹಿಸಿಕೊಂಡು, ಸರ್ಕಾರದ ನಿಯಮಾನುಸಾರ ಮನೆಗಳ ಆಯ್ಕೆಗೆ ಜಾಗೃತ ಸಮಿತಿ ಸಭೆಯಲ್ಲಿ ಗ್ರಾಮಗಳ ಆಯ್ಕೆ ಮಾಡಿ ಗ್ರಾಮ ಸಭೆಯನ್ನು ನಡೆಸಿ ಅರ್ಹ ಫಲಾನುಭವಿಗಳ ಗ್ರಾಮವಾರು ಆಯ್ಕೆ ಮಾಡಬೇಕಾಗಿರುತ್ತದೆ. ಅದರಂತೆ ಹಲವಾರು ಭಾರಿ ಮಾನ್ಯ ಶಾಸಕರ ಗಮನಕ್ಕೆ ತಂದಾಗ ಅವರು ದಿನಾಂಕ; 05-11-2012 ರಂದು ಜಾಗೃತ ಸಮಿತಿ ಸಭೆ ನಡೆಸಲು ತಿಳಿಸಿದಂತೆ ದಿನಾಂಕದಂದು ಜಾಗೃತ ಸಮಿತಿ ಸಭೆ ನಡೆಸಿ ಗ್ರಾ.ಪಂ. ವಾರು ಗ್ರಾಮಗಳ ಆಯ್ಕೆ ಮಾಡಿ ಗ್ರಾಮ ಪಂಚಾಯಿತಿಯವರು, ಗ್ರಾಮವಾರು ಗ್ರಾಮಸಭೆ ನಡೆಸಲು ದಿನಾಂಕ: 08-01-2013 ರಂದು ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಆದೇಶ ಮಾಡಿರುತ್ತಾರೆ. ಅದರಂತೆ ಕೆಲವು ಗ್ರಾ.ಪಂ. ಯಿಂದ ಸುಮಾರು 840 ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್ ರವರಿಗೆ ದಿನಾಂಕ: 23-03-2013 ರಂದು ಕಳುಹಿಸಿರುವುದಾಗಿಯೂ,ಇನ್ನುಳಿದ ಗ್ರಾ.ಪಂ.ಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ನಿಯೋಜಿಸಿದ್ದ ನೋಡಲ್ ಅಧಿಕಾರಿಗಳು ನಿಗದಿತ ಸಮಯದಲ್ಲಿ ಗ್ರಾಮಸಭೆ ನಡೆಸಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಪಂಚಾಯತಿಗೆ ಸಲ್ಲಿಸದೇ ಇದ್ದುದರಿಂದ ಮತ್ತು ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇದ್ದುದರಿಂದ ಗ್ರಾಮಸಭೆಗಳನ್ನು ನಡೆಸಲಾಗಿರುವುದಿಲ್ಲ. ಮತ್ತು ಚುನಾವಣೆ ನಂತರ ಹಿಂದೆ ಮಂಜೂರಾದ ಆಯ್ಕೆಯಾಗದೆ ಉಳಿದಿರುವ ಬಸವ ವಸತಿ ಯೋಜನೆಯ ಎಲ್ಲಾ ಮನೆಗಳನ್ನು ರಾಜೀವ್‌ಗಾಂಧಿ ವಸತಿ ಕಾರ್ಪೊರೇಷನ್ ರವರು ರದ್ದುಪಡಿಸಿರುತ್ತಾರೆ ಆದ್ದರಿಂದ ಈ ವಿಚಾರದಲ್ಲಿ ಯಾವುದೇ ವಿಧವಾದ ಕರ್ತವ್ಯಲೋಪ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು ಗ್ರಾಮ ಪಂಚಾಯತಿಗಳಿಗೆ ಸರ್ಕಾರದ ಯೋಜನೆಗಳಂತೆ ಎಲ್ಲಾ ಕ್ಷೇತ್ರಗಳಿಗೆ ಅನುದಾನ ನೇರವಾಗಿ ಜಿಲ್ಲಾ ಪಂಚಾಯತ್ ಮುಕ್ತ ಸರ್ಕಾರದಿಂದಲೇ ಬಿಡುಗಡೆಯಾಗುವುದರಿಂದ ಇದರಲ್ಲಿ ಯಾವ ಪಾತ್ರವೂ ಸಹ ಇರುವುದಿಲ್ಲ. ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಸಾಮಾಜಿಕ ನ್ಯಾಯ ಸಮಿತಿ ಮತ್ತು ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದಂತೆ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಿರುವುದರಿಂದ ಇದರಲ್ಲಿಯೂ ಕೂಡ ಯಾವ ಪಾತ್ರವೂ ಸಹ ಇರುವುದಿಲ್ಲ. ಮತ್ತು ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ಆದ್ದರಿಂದ ತಮ್ಮ ವಿರುದ್ಧದ ಆರೋಪಗಳಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

ದಿನಾಂಕ 23-12- 2013 ರ ನೋಟೀಸಿಗೆ ಅಪಾದಿತರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳ ಬಗ್ಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಅಪಾದಿತರ ವಿರುದ್ಧದ ಆರೋಪಗಳು ಮತ್ತು ಅವರುಗಳು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಅಭಿಪ್ರಾಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ವಿಸೇಬಿ 2013 ಬೆಂಗಳೂರು ದಿನಾಂಕ:26-06-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀ ಗದಗೆಪ್ಪ ಕುರಕೋಟೆ, ಹಿಂದಿನ

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್(ಬಿ) ಬೀದರ್ ಜಿಲ್ಲೆ, ಪ್ರಸ್ತುತ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರಿಗೆ ದಿನಾಂಕ 23-12-2013 ರ ಕಾರಣ ಕೇಳುವ ನೋಟೀಸಿನಲ್ಲಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, **ಕರ್ನಾಟಕ ನಾಗರೀಕ ಸೇವಾ** (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ **1957** ರ ನಿಯಮ **8(ii)**ರಡಿ ಪ್ರದತ್ತವಾದ ಅಧಿಕಾರದನ್ವಯ **"ವಾಗ್ದಂಡನೆ"** ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್.
3. ಶ್ರೀ ಗದಗೆಪ್ಪ ಕುರಕೋಟೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್(ಬಿ) ಬೀದರ್ ಜಿಲ್ಲೆ, ಪ್ರಸ್ತುತ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬಳ್ಳಾರಿ

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.